## ಮೈಸೂರು ಡಿಸ್ಟ್ರಿಕ್ಟು.

### ಇನ್ಸ್ಟಿಹಾರ್ನಾಮೆ.

ತಾರೀಖು 9ನೆ ಏಪ್ರೆಲ್ 1907.

ನಾಗವಂಗಲ ತಾಲ್ಲೂಕು ಹೊಣಕೆರೆ ಹೋಬ್ಳಿಗೆ ಕ್ಕೇದ ಜೋಡಿ ಹುಲ್ಲಿಕೆರೆ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಸದರ ಜೋಡಿ ಹುಲ್ಲಿಕೆರೆ ಗ್ರಾಮದಲ್ಲಿ 1907ನೆ ಮೇ ಮಾಹೆ 28ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಏಪ್ರೆಲ್ 18ನೆ ವಾರ್ತಂ. 16ನೆ ನಂಬರ್ ಮೈಸೂರು ಗೆಜೆಟ್ಟಿನ 11ನೆ ಭಾಗದ 132—133ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

## ಕಡೂರು ಡಿಸ್ಟ್ರಿಕ್ಟು.

### ಇನ್ಸ್ಟಿಹಾರ್ನಾಮೆ.

ತಾರೀಖು 3ನೆ ಏಪ್ರೆಲ್ 1907ನೆ ಇಸವಿ, ಚಿಕ್ಕಮಗಳೂರು.

ಸನ್ 1901ನೆ ಇಸವಿ ಡಿಸೆಂಬರು 11ನೆ ವಾರ್ತಂ ನಂಬರು 9,007—ಲೆ. ಜಿ. 56ನೆ ಗವರ್ನ್‌ಮೆಂಟು ನೋಟಿಫಿಕೇಷನ 5ನೆ ಪ್ಯಾರಾ ಮೇರಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಚಾಲ್ತಿ ಸನ್ 1907ನೆ ಸಾಲ್ ಏಪ್ರೆಲ್ 1ನೆ ತಾರೀಖು ಲಾಗಾಯಿತು ಸೆಪ್ಟಂಬರ್ 30ನೆ ತಾರೀಖು ವರಿಗೆ ಮೀನುಗಳನ್ನು ಹಿಡಿಯುವುದನ್ನು ನಿಷೇಧ ಮಾಡಿ ಇದೆ.

ಡಿ. ದೇವರಾಜ ಅರಸ್,
ಡೆಪ್ಯುಟಿ ಕಮಿಷನರ್.

ತಾರೀಖು 6ನೆ ಏಪ್ರೆಲ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನಂದರೆ, 1907ನೆ ಇಸವಿ ಜಲ್ಲೆ ಗುರ್ಜಾ ಲಾಗಾಯಿತು 1908ನೆ ಇಸವಿ ಜಾರ್ ಆಖೈರ್ ವರಿಗೆ ಬೈದಾಗುವ ಬಂದು ವರುಷಕ್ಕೆ ಕಡೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳಗಳಲ್ಲಿ ಅವುಗಳ ಬಾಜಾವಲ್ಲಿ ಕಂಡ ತಾರೀಖುಗಳಲ್ಲಿ ಟೋಲೆಯಾನೆ ಸುಂಕವನ್ನು ವಸೂಲು ಮಾಡುವ ಹಕ್ಕು ಡೆಪ್ಯುಟಿ ಕಮಿಷನರ್ ಯಾ ಈ ಕೆಲಸಕ್ಕೆ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚಿಗೆ ತಪಶೀಲುಗಳನ್ನು 1907ನೆ ಇಸವಿ ಏಪ್ರೆಲ್ 18ನೆ ತಾರೀಖು ಗೆಜೆಟ್ಟಿನ 2ನೆ ಭಾಗದ 134—135ನೆ ನಂಬರ್ ಪೇಜಿನಲ್ಲಿ ಪ್ರಾಯಿಷ್ಹಾಡಿರುವ 1907ನೆ ಇಸವಿ ಏಪ್ರೆಲ್ 6ನೆ ವಾರ್ತಂನ ಇನ್ಸ್ಟಿಹಾರ್ನಾಮೆಯ ಮೂಲಕ ತಿಳಿದುಕೊಳ್ಳಬಹುದು.

| ನಂಬರ್. | ಟೋಲ್‌ಗೇಟು ಹೆಸರು. | ಹರಾಜು ತಾರೀಖು. | ಹರಾಜು ನಡೆಯುವ ಸ್ಥಳ. |
|---|---|---|---|
| 1 | ತಡಸ (ಭದ್ರಾನದಿಯ ಸೇತುವೆ) | 18ನೆ ಮೇ 1907. | ಎಡೇಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ. |
| 2 | ಹರಿಹರಪುರ (ತುಂಗಾನದಿ ಸೇತುವೆ) ... | 20ನೆ ಡಿಟೋ ... | ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ. |
| 3 | ಬಾಳೆಹೊನ್ನೂರು (ಭದ್ರಾನದಿ ಸೇತುವೆ) .. | 23ನೆ ಡಿಟೋ .. | ಬಾಳೆಹೊನ್ನೂರು ಮುನಸಾರ್ ಬ. ಗರಿಯಲ್ಲಿ. |

ಎಂ. ಲಕ್ಷ್ಮಣಾಸ್ತ್ರಿ,
ಥರ್ಡ್ ಡೆಪ್ಯುಟಿ ಕಮಿಷನರ್.

## ಕೋಲಾರ ಡಿವೀಜ್.

### ಇನ್ಸ್ಟಿಹಾರ್ನಾಮೆ.

ಕೋಲಾರ, 8ನೆ ಏಪ್ರೆಲ್ 1907.

ತಾರೀಖು 11ನೆ ಏಪ್ರೆಲ್ 1907 ಇಸವಿ 2ನೆ ಭಾಗದ ಇಂಗ್ಲೀಷ್ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರತಕ್ಕ ಕೋಲಾರ ಡಿಸ್ಟ್ರಿಕ್ಟು ಮಾಲೂರು ಕಸಬಾದಲ್ಲಿ ಹೊಸದಾಗಿ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಕಟ್ಟುವಕ್ಕೆ ಬಗ್ಗೆ ಟೆಂಡರ್ ವಿಷಯಕವಾದ ಇನ್ಸ್ಟಿಹಾರ್ನಾಮೆಗೆ ಸಮಸ್ತ ಜನಗಳೂ ಗಮನಕೊಡತಕ್ಕದ್ದು.

ಕೆ. ಕೃಷ್ಣಯ್ಯಂಗಾರ್,
ಎಗ್ಜಿಕ್ಯೂಟೀವ್ ಇಂಜನಿಯರ್.